ನಿಲ್ಲದ ನನ್ನ ಪ್ರೀತಿ ಹರಿದು ಹೋಗುವುದು ವೇಗಕ್ಕಂಟಿದ ನನ್ನ ಬದುಕಿನೊಡನೆ ಜೊತೆ ನಿಲ್ಲಲು ನೀನೂ ಹರಿಯಬೇಕು. ಏನೊಂದೂ ಆಗದ ನಿನ್ನ ಖಾಲಿ ಒಳ್ಳೆಯತನವ ಎಷ್ಟೆಂದು ಶ್ಲಾಘಿಸಲಿ? ಬೇರೆಲ್ಲವೂ ಇದ್ದಾಗ ಈ ಒಳ್ಳೆಯತನ, ಹಿನ್ನೆಲೆಯಾಗಿ ಹೊಳಪು ನೀಡಬಲ್ಲದು. ಆದರೆ ಅದೊಂದೇ ಏಕಾಂಗಿಯಾಗಿ ನಿರುಪಯೋಗದ್ದು.

ನನಗೆ ಗೊತ್ತು ನಾನು ತುಂಬಾ ಕ್ರೂರಿಯಾಗುತ್ತಿದ್ದೇನೆ. ಕಠಿಣಳಾಗುತ್ತಿದ್ದೇನೆ... 'ಬೇವಫಾ' 'ಬೇದರ್ದ್' ಇನ್ನೂ ಏನೇನೋ ಪದಗಳಿವೆ ಪ್ರೇಮದ ನಿಘಂಟಿನಲ್ಲಿ. ಆದರೆ ಕೆಲವೊಮ್ಮೆ ಸ್ವಾರ್ಥಿಯಾಗುವುದು ಅಗತ್ಯವಾಗುತ್ತದೆ– ನಾಳಿನ ಸ್ವಯಂಮರುಕದ, ಸ್ವತಃ ಸ್ವಾಗತಿಸಿದ ನೋವಿನ ಬದುಕಿಗಿಂತ, ಸಂಬಂಧಗಳು ಬೆಳೆಯಬೇಕು, ಬೆಸೆಯಬೇಕು, ಹಿಗ್ಗಬೇಕು, ಹಬ್ಬಬೇಕು. ಏನೊಂದೂ ಶ್ರಮಿಸದೆ ಕಾಲದ ದೂಳು ಕೂತರೂ ಜಾಡಿಸದೆ ಆರಾಮಾಗಿ ಅಮ್ಮನಿತ್ತ ಆಶ್ವಾಸನೆಯ ಭರವಸೆಯಲ್ಲಿ ನೆಮ್ಮದಿಯಿಂದಿರುವ ಇವನ ಸ್ವಭಾವವ 'ಒಳ್ಳೆಯತನ'ವೆನ್ನಲೆ. ವಾಸ್ತವವರಿಯದ ಮೂರ್ಖತನವೆನ್ನಲೆ?

ರವಿಯತ್ತ ನನ್ನ ಬದಲಾದ ಭಾವನೆಗಳು ಎದೆಭಾರ ತಂದಿದ್ದವು. ಇತ್ತೀಚೆಗೆ ಹಲವು ಬಗೆಯಲ್ಲಿ ಅಪರೋಕ್ಷವಾಗಿ ರವಿಗೆ ಸೂಚನೆಗಳನ್ನು ನೀಡುತ್ತಲೇ ಇದ್ದೆ. ಸಂಜೆಗಳಲ್ಲಿ ಏನಾದರೂ ಕೆಲಸ ಅಂಟಿಸಿಕೊಂಡು 'ಬಿಜಿ'ಯಾಗತೊಡಗಿದೆ. ಮನೆಗೆ ಬಂದಾಗಲೂ ಅವನೆದುರೇ ಕುಳಿತಿರುವುದ ನಿಲ್ಲಿಸಿ, ನನ್ನ ಪಾಡಿಗೆ ರೂಮು ಸೇರಿ ಪುಸ್ತಕ ಹಿಡಿಯುತ್ತಿದ್ದೆ. ಆದರದೇಕೋ ರವಿಗೆ ನನ್ನ ವರ್ತನೆಗಳು ಕೂಗಿ ಹೇಳುವುದು, ಕೇಳಿಸಲೇ ಇಲ್ಲ. ಅಷ್ಟೆಲ್ಲ ನನ್ನ ಬದಲಾದ ವರ್ತನೆಗಳ ಅರ್ಥ ಮಾಡಿಕೊಳ್ಳುವಷ್ಟು ಅವ ಸೂಕ್ಷ್ಮವಿರಲಿಲ್ಲವೋ, ಇಲ್ಲ ಅವನ ಅತ್ಯಂತ ಸರಳ ಚಿಂತನ ವಿಧಾನಕ್ಕೆ ಇವೆಲ್ಲವೂ ಹೊರತಾಗಿತ್ತೋ ತಿಳಿಯದು.

ಕೊನೆಗೆ ಏನೋ ತಟ್ಟನೆ ಹೊಳೆಯಿತು. ನಾನೇಕೆ ರವಿಯ ಹೊರತು ಬೇರೆ ಹುಡುಗರೊಡನೆ ಸ್ನೇಹದ ಮಟ್ಟದಲ್ಲಿ ಬೆರೆಯಲು ಹಿಂಜರಿಯುತ್ತೇನೆ? ಕಾಲೇಜು ದಿನಗಳಲ್ಲಾದರೆ ಅಪ್ಪನ ಹದ್ದುಬಸ್ತಿನ ಹೆದರಿಕೆಯಿತ್ತು. ಗಂಡು ಹುಡುಗರೊಡನೆ ಮಾತನಾಡಿದರೂ ಮೈಲಿಗೆಯಾಗುತ್ತದೆಂಬ ಅಮ್ಮನಿಗೆ, ರವಿಯೊಬ್ಬನೇ 'ರಿಯಾಯಿತಿ'. ಕಾರಣ, ಅವ ನನ್ನ ಸಂಬಂಧಿ– ನಾಳೆ ನನ್ನ ಗಂಡನಾಗುವವನು– ಎಲ್ಲಕ್ಕಿಂತ ಮುಖ್ಯವಾಗಿ ಅಮ್ಮನ ದೃಷ್ಟಿಯಲ್ಲಿ ಅವನು ಬಹಳ ಒಳ್ಳೆಯ ಹುಡುಗ, ಬಹುಶಃ ಅಮ್ಮ ಅಪ್ಪ ನನ್ನ ಸುತ್ತ ಕಟ್ಟಿದ ಬೇಲಿಯಲ್ಲಿ ಪ್ರವೇಶಿಸಿದ್ದು ರವಿಯೊಬ್ಬನೆ. ಹಾಗೆಂದೇ ನಾನು ಅವನನ್ನು ಪ್ರೀತಿಸಿರಲಿಕ್ಕೂ ಸಾಧ್ಯ. ನಾನು ಇನ್ನೂ ಅದೇ ಮೌಲ್ಯಗಳ ಬಿಗಿ ಹಿಡಿದು, ಹಾದಿಯಲ್ಲಿ ಸಹಪಾಠಿಗಳು ಸಿಕ್ಕರೂ 'ಹಲೋ' ಹೇಳಲೂ ಹಿಂದೆ ಮುಂದೆ ನೋಡುವುದೇಕೆ?

ಮನಸ್ಸಲ್ಲೇ ಏನೋ ನಿರ್ಧರಿಸಿದೆ–

ಮತ್ತೆ ಮೆಲ್ಲನೆ ನನ್ನ 'ಕಕೂನಿ'ನ ಒಂದೊಂದೇ ನೂಲ ಎಳೆ ಕಡಿದು ಹೊರಬರಲು ಪ್ರಯತ್ನಿಸಿದೆ. ಆಗಾಗ ಬರುವ ರಮೇಶನೊಡನೆ ಒಂದಿಷ್ಟು ಕೆಲಸದಾಚೆಗೂ ಹಗುರಾಗಿ ಮಾತನಾಡತೊಡಗಿದೆ. ಅಣ್ಣನ ಸ್ನೇಹಿತ ಬಂದಾಗಲೂ, ಅಮ್ಮ ಅಡಿಗೆ ಮನೆಯಿಂದಲೇ ದುರು ದುರು ಕಣ್ಣು ಬಿಟ್ಟು ನೋಡಿದರೂ, ಅವನ ಥೀಸೀಸ್, ವಿದೇಶ ಯಾತ್ರೆ ಎಂದೆಲ್ಲ ಹರಟಿದೆ. ಸಹೋದ್ಯೋಗಿಗಳ ಜೊತೆ ಮುಜುಗರ ಬಿಟ್ಟು ಮಾತಾಡಲು ಕಲಿತೆ.

ಇದೀಗ ನನ್ನ ಸ್ನೇಹಿತರ ವೃಂದ ಹೆಚ್ಚಿತು. ಹೊರ ಜಗತ್ತಿನ ಪದರ ಪದರಗಳು ತೆರೆದುಕೊಂಡವು. ರವಿಯ ಕಣ್ಣಿಗೂ ಇದು ಬಿತ್ತು. ತಟ್ಟನೆ ಅವನ ಹಣೆಯಲ್ಲಿ ದಟ್ಟ ಗೆರೆಗಳು